ಓ ಎಸ್ ನಂ.12/2015 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಕಾಂತಲಕ್ಷ್ಮಿ

ದಿನಾಂಕ 18-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ.ಎಲ್.ಎಂ. ವಕೀಲರಿಂದಃ

1) ದಿನಾಂಕಃ02.06.2003 ರಂದು ದಾವಾ ಐಟಂ ನಂ.2 ಮತ್ತು 3 ನ್ನು 10 ನೇ ಪ್ರತಿವಾದಿಗೆ ನನ್ನ ತಂದೆ ಹೊನ್ನಪ್ಪ ಮತ್ತು 5 ನೇ ಪ್ರತಿವಾದಿ ಸೇರಿ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜುರುಪಡಿಸಿದ್ದು ಅದನ್ನು ನಿಪಿ 1 ಎಂದು,

2) ದಿನಾಂಕಃ17.08.2005 ರಂದು ದಾವಾ ಐಟಂ ನಂ.4 ನ್ನು 6 ನೇ ಪ್ರತಿವಾದಿ 11 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜುರುಪಡಿಸಿದ್ದು ಅದನ್ನು ನಿಪಿ 2 ಎಂದು,

3) ದಿನಾಂಕಃ 06.09.2005 ರಂದು ದಾವಾ ಐಟಂ ನಂ.5 ಮತ್ತು 6 ನ್ನು 2, 3 ಮತ್ತು 14 ನೇ ಪ್ರತಿವಾದಿ 12 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜುರುಪಡಿಸಿದ್ದು, ಅದನ್ನು ನಿಪಿ 3 ಎಂದು,
4) ದಿನಾಂಕಃ 06.06.2017 ರಂದು ದಾವಾ ಐಟಂ ನಂ.7 ನ್ನು 4 ನೇ ಪ್ರತಿವಾದಿ 13 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜುರುಪಡಿಸಿದ್ದು ಅದನ್ನು ನಿಪಿ 4 ಎಂದು,
5) ದಿನಾಂಕಃ 26.07.1999 ರಂದು ಸರ್ವೆ ನಂ.112/3 ರಲ್ಲಿರುವ 16 ಗುಂಟೆ ಮತ್ತು ಸರ್ವೆ ನಂ.113/9 ರಲ್ಲಿನ 22 ಗುಂಟೆ ಅಂದರೆ ದಾವಾ ಐಟಂ ನಂ.8 ಮತ್ತು 9 ರ ಒಂದು ಭಾಗವನ್ನು ನನ್ನ ತಂದೆ ಹೊನ್ನಪ್ಪರವರು 10 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜುರುಪಡಿಸಿದ್ದು ಅದನ್ನು ನಿಪಿ 5 ಎಂದು,
6) ದಿನಾಂಕಃ 26.07.1999 ರಂದು ಸರ್ವೆ ನಂ.112/3 ರಲ್ಲಿರುವ 1 ಎಕರೆ ಜಮೀನು ಅಂದರೆ ದಾವಾ ಐಟಂ ನಂ.9 ರ ಒಂದು ಭಾಗವನ್ನು ನನ್ನ ತಂದೆ ಹೊನ್ನಪ್ಪರವರು 10 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜುರುಪಡಿಸಿದ್ದು, ಅದನ್ನು ನಿಪಿ 6 ಎಂದು,
7) ಚೀರನಹಳ್ಳಿ ಗ್ರಾಮದ ಸರ್ವೆ ನಂ.155/2 ಮತ್ತು 156/1 ಕ್ಕೆ ಸಂಬಂಧಿಸಿದ ಎರಡು ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.